

ವ್ಯವಸ್ಥೆ ತರುವಲ್ಲಿ ಪ್ರಧಾನ ಪಾತ್ರ ವಹಿಸಲಿದೆ ಎಂಬ ಮಾಹಿತಿ ಇದೆ.

ಐಓಟಿಯಲ್ಲಿ ಸಂಪರ್ಕಕ್ಕೊಳಗಾಗಬಹುದಾದ ಗ್ಯಾಡ್ಜೆಟ್‌ಗಳು, ಕಂಪ್ಯೂಟರ್, ಸೆನ್ಸರ್‌ಗಳು, ಇಂಟರ್ನೆಟ್ ಮೂಲಕ ಸಂಪರ್ಕದಲ್ಲಿರುತ್ತವೆ. **RFID** – ರೇಡಿಯೋ ಫ್ರೀಕ್ವೆನ್ಸಿಐಡೆಂಟಿಫಿಕೇಶನ್, **NFC** – ಅತೀ ಸಮೀಪ ಸಂವಹನ (**Near Field Communication**), ವೈಫೈ ಈಥರ್‌ನೆಟ್ ಮೂಲಕ ಒಂದಕ್ಕೊಂದು ಮಾಹಿತಿ ನೀಡುತ್ತ, ಸ್ವೀಕರಿಸುತ್ತಾ, ಆದೇಶ ಪಾಲಿಸುತ್ತ ಸದಾ ಒಂದನ್ನೊಂದು ಗುರುತಿಸುತ್ತಾ, ಸರ್ವರ್‌ಗೆ ಮಾಹಿತಿ ತಿಳಿಸುತ್ತಾ ಕೆಲಸ ಮುಂದುವರೆಸುತ್ತವೆ. 2018ರ ಅಂಕಿಅಂಶಗಳಂತೆ ಈಗಾಗಲೇ ವಿಶ್ವದಲ್ಲಿರುವ ಇಂಟರ್ನೆಟ್ ಸಂಪರ್ಕಿತ ಸಾಧನಗಳ ಸಂಖ್ಯೆ 1800 ಕೋಟಿ. ಅಂದರೆ ಪ್ರಪಂಚದ ಜನಸಂಖ್ಯೆಯ ಆಲ್‌ಮೋಸ್ಟ್ ಎರಡೂವರೆ ಪಟ್ಟು. ಅದರಲ್ಲಿ 800 ಕೋಟಿ ಸಾಧನಗಳು ಐಓಟಿ ವ್ಯಾಪ್ತಿಯಲ್ಲಿವೆ. 2020ರ ವೇಳೆಗೆ ಈ ಸಾಧನಗಳ ಸಂಖ್ಯೆ 26 ಬಿಲಿಯನ್‌ನಿಂದ 50 ಬಿಲಿಯನ್ ತಲುಪುವ ಅಂದಾಜಿದೆ.

ಕೈಗಾರಿಕೆಗಳಲ್ಲಿ ಉತ್ಪಾದನೆಯ ಕೆಲಸಗಳಲ್ಲಿ ಬಳಸುವ ಐಓಟಿಯನ್ನು 'ಇಂಡಸ್ಟ್ರಿಯಲ್ ಐಓಟಿ' ಎನ್ನುತ್ತಾರೆ. ತಯಾರಿಕಾ ಘಟಕಗಳಲ್ಲಿ ಬಳಸುವ ಸೆನ್ಸರ್, ಯಂತ್ರಗಳು ಮತ್ತು ರೋಬೋಟ್‌ಗಳು ಇಂಟರ್ನೆಟ್‌ಗೆ ಕನೆಕ್ಟ್ ಆಗಿದ್ದು ಸೆನ್ಸರ್‌ಗಳ ಮೂಲಕ ಬರುವ ಮಾಹಿತಿಯನ್ನು ರಿಯಲ್ ಟೈಂನಲ್ಲಿ ವಿಶ್ಲೇಷಿಸಿ, ಯಂತ್ರಗಳನ್ನು ನಿಯಂತ್ರಿಸಿ, ಉತ್ಪನ್ನಗಳನ್ನು ತಯಾರಿಸುತ್ತವೆ.

ದೇಹದ ಮೇಲೆ ಧರಿಸಲಾಗುವ ಎಲೆಕ್ಟ್ರಾನಿಕ್ ಉತ್ಪನ್ನಗಳು **BAN** – ಬಾಡಿ ಏರಿಯಾ ನೆಟ್‌ವರ್ಕ್ ಸ್ಮಾರ್ಟ್ ಹೋಂಗಳು, **LAN** – ಲೋಕಲ್ ಏರಿಯಾ ನೆಟ್‌ವರ್ಕ್, ರಸ್ತೆಗಿಳಿಯುವ ಕಾರುಗಳು **WAN** – ವೈಡ್ ಏರಿಯಾ ನೆಟ್‌ವರ್ಕ್ ಹಾಗೂ ಸ್ಮಾರ್ಟ್ ಸಿಟಿಗಳು **VWAN** – ವೆರಿ ವೈಡ್ ಏರಿಯಾ ನೆಟ್‌ವರ್ಕ್‌ಗಳ ಮೇಲೆ ಕೆಲಸ ಮಾಡುತ್ತವೆ. ಇವು ಸಮರ್ಥವಾಗಿ ಕೆಲಸ ನಿರ್ವಹಿಸಲು ಅವು ನಿರಂತರವಾಗಿ ಇಂಟರ್ನೆಟ್ ಸಂಪರ್ಕದಲ್ಲಿರಲೇ ಬೇಕಾಗುತ್ತದೆ. ಆರಂಭದಲ್ಲಿ ಬಂದ ಇಂಟರ್ನೆಟ್ ತಾನೇ ಮಾಹಿತಿ ಉತ್ಪಾದಿಸುತ್ತಿತ್ತು. ಈಗ ಬರಲಿರುವ ಹೊಸ ವಿಧಾನದಲ್ಲಿ ವಸ್ತುಗಳೇ ಮಾಹಿತಿ ಉತ್ಪಾದಿಸುತ್ತವೆ. ಯಾವ ಯಾವ ವಸ್ತುಗಳನ್ನು ಇಂಟರ್ನೆಟ್ ಮೂಲಕ ಜೋಡಿಸಲು ಸಾಧ್ಯವೋ ಅವೆಲ್ಲವನ್ನೂ ಜೋಡಿಸುವುದನ್ನು ಐಓಟಿ ಮಾಡುತ್ತದೆ. ಕ್ಲುಪ್ತ ಸಮಯದಲ್ಲಿ ಸರಿಯಾದ ನಿರ್ಧಾರ ಕೈಗೊಳ್ಳಲು, ನಿಗದಿತ ಸಮಯದಲ್ಲಿ ಕೆಲಸ ಮಾಡಲು, ಸಮಸ್ಯೆರಹಿತ ವಾಹನ ಚಾಲನೆ ನಿಲುಗಡೆ ಮಾಡಲು, ಸಂಪನ್ಮೂಲಗಳ ಅನಗತ್ಯ ಬಳಕೆ ತಪ್ಪಿಸಲು ಮತ್ತು ಪೂರ್ಣ ಸಾಮರ್ಥ್ಯದ ಉಪಯೋಗ ಪಡೆಯಲು ಐಓಟಿ ಸಹಕರಿಸುತ್ತದೆ. ಇದುವರೆಗೂ ಮಾಡುತ್ತಿದ್ದ ಕೆಲಸಗಳನ್ನೆಲ್ಲಾ